ಮುಖ್ಯಮಂತ್ರಿಯವರು ಇತ್ತೀಚೆಗೆ ಬಿಡುಗಡೆ ಮಾಡಿರುತ್ತಾರೆ. ಈ ಅನುದಾನವನ್ನು ಈ ವರ್ಷ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳ ಪೈಕಿ ಅತೀ ಅವಶ್ಯಕವಾದ ತುರ್ತು ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಿಸಲು ಉಪಯೋಗಿಸಲಾಗುವುದು.

(ಪಿ.ಜಿ.ಆರ್. ಸಿಂಧ್ಯಾ)
ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ
ಮೂಲಭೂತ ಸೌಲಭ್ಯಗಳ ಸಚಿವರು
(ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

ಸದನವು ಪುನ: ಮಧ್ಯಾಹ್ನ 3 ಗಂಟೆಗೆ 17 ನಿಮಿಷಕ್ಕೆ ಸಮಾವೇಶಗೊಂಡಿತು
ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠವನ್ನಲಂಕರಿಸಿದರು

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ

ಶ್ರೀ ನರಸಿಂಹ ನಾಯಕ್ (ರಾಜೂಗೌಡ) (ಸುರಪುರ): ಮಾನ್ಯ ಅಧ್ಯಕ್ಷರೆ, 2005ರ ಮಾರ್ಚ್‌ನಲ್ಲಿ ನಡೆದ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಯಾದಗಿರಿ ಶೈಕ್ಷಣಿಕ ಜಿಲ್ಲೆ ರಾಜ್ಯದಲ್ಲಿ 4ನೇ ಸ್ಥಾನ ಗಳಿಸಿರುವ ಬಗ್ಗೆ ಶಿಕ್ಷಣ ಇಲಾಖೆಯು ತನಿಖೆ ನಡೆಸಿ ನೀಡಿರುವ ವರದಿಯಿಂದ ಉದ್ಭವಿಸಿರುವ ಪರಿಸ್ಥಿತಿ ಬಗ್ಗೆ ನಾನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಹೇಳಿಕೆಯನ್ನು
ಲಗತ್ತಿಸಲಾಗಿದೆ)

ಶ್ರೀ ರಾಮಲಿಂಗಾರೆಡ್ಡಿ: ಘಾನ್ಯ ಸಭಾಧ್ಯಕ್ಷರೆ, ಯಾದಗಿರಿ ಎಂದರೆ ಇದು ಶೈಕ್ಷಣಿಕ ಜಿಲ್ಲೆಯಾಗಿದೆ. ನಮ್ಮ ಶಿಕ್ಷಣ ಇಲಾಖೆಯಲ್ಲಿ ಶೈಕ್ಷಣಿಕವಾಗಿ 32 ಜಿಲ್ಲೆಗಳಿರುತ್ತವೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2005ರ ಮಾರ್ಚ್ ಪರೀಕ್ಷೆಯ ಫಲಿತಾಂಶಗಳ ವಿಶ್ಲೇಷಣೆಯನ್ನು ಮಂಡಳಿ ಕೈಗೆತ್ತಿಕೊಂಡಿದೆ. ಮುಖ್ಯವಾಗಿ ಕೆಲವು ಜಿಲ್ಲೆಗಳು ಹಿಂದಿನ ವರ್ಷಕ್ಕೆ ಹೋಲಿಸಿದರೆ, 28–29 ಸ್ಥಾನದಲ್ಲಿದ್ದು, ಈಗ ಮೊದಲ 5ರ ಸ್ಥಾನದಲ್ಲಿ ಬಂದಿರುವುದನ್ನು ಕಾಣಲಾಗಿದೆ. ಇದಕ್ಕಾಗಿ ಕಾರಣಗಳನ್ನು ಹುಡುಕಲು ಹಾಗೂ ಶೈಕ್ಷಣಿಕವಾಗಿ ವಿಶ್ಲೇಷಣೆ ಮಾಡಲು ಕ್ರಮ ಕೈಗೊಳ್ಳಲಾಯಿತು. ಹೀಗೆ ಮಾಡುವಾಗ ಆಯಾ ಜಿಲ್ಲೆಗಳ ಪ್ರತಿ ಪರೀಕ್ಷಾ ಕೇಂದ್ರದ ಉತ್ತರ ಪತ್ರಿಕೆಗಳನ್ನು ರ್‍ಯಾಂಡಮ್ ಆಗಿ ಆಯ್ಕೆ ಮಾಡಿ ಪರಿಣಿತ ಮೌಲ್ಯಮಾಪಕರಿಗೆ ವಹಿಸಲಾಯ್ತು.

ಹೀಗೆ ಮಾಡಿದ ಮೌಲ್ಯಮಾಪನದಲ್ಲಿ ಹಲವಾರು ಆತಂಕಕ್ಕೊಳಗಾಗುವ ಅಂಶಗಳನ್ನು ಕಾಣಲಾಯಿತು. ಅವುಗಳಲ್ಲಿ ಮುಖ್ಯವೆಂದರೆ.

1) ಹಲವು ವಿಷಯಗಳಲ್ಲಿ ನಿರ್ದಿಷ್ಟ ಪ್ರಶ್ನೆಗಳಿಗೆ ಸಾಮೂಹಿಕವಾಗಿ ಉತ್ತರಗಳನ್ನು ನಕಲು ಮಾಡಿಸಲಾಗಿದೆ.

2) ಅಭ್ಯರ್ಥಿಗಳಿಗೆ ಸರಿಯಾದ ಉತ್ತರಗಳ ಉಕ್ತಲೇಖನ ನೀಡಿ ಅವರು ನಂತರ ನೀಟಾಗಿ ಉತ್ತರ ಪತ್ರಿಕೆಗಳಲ್ಲಿ ನಕಲು ಮಾಡಿದ್ದಾರೆ. ಮೊದಲು ಉಕ್ತಲೇಖನದಲ್ಲಿ ಬರೆದುಕೊಂಡ ನಂತರ ನೀಟಾಗಿ ಉತ್ತರಗಳನ್ನು ಬರೆದ ಎರಡೂ ಭಾಗದಲ್ಲೂ ಲಭ್ಯ ಇವೆ.

3) ಹಲವಾರು ಉತ್ತರ ಪತ್ರಿಕೆಗಳಲ್ಲಿ ಮೊದಲ 2–3 ಪುಟದ ನಂತರ ಸರಿಯಾದ ಉತ್ತರಗಳನ್ನು ಬೇರೆಯವರು ಬರೆದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕೈ ಬರಹದ ವ್ಯತ್ಯಾಸ ಮೇಲ್ನೋಟಕ್ಕೆ ಸಾಬೀತಾಗಿದೆ.

4) ಇಂಗ್ಲೀಷ್ ಭಾಷೆಯಲ್ಲಿ ಕೆಲವು ಪದಗಳನ್ನು ಬರೆಯಲು ಕಷ್ಟಪಡುವ ಅಭ್ಯರ್ಥಿಗಳು ಪ್ರಬಂಧಗಳನ್ನು ತಪ್ಪಿಲ್ಲದೆ ಬರೆದಿರುವುದು ಕಂಡುಬರುತ್ತದೆ. ಇಂತಹ ಎಲ್ಲ ಉತ್ತರ ಪತ್ರಿಕೆಗಳಲ್ಲಿ ನಕಲಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

5) ಹಲವಾರು ಉತ್ತರ ಪತ್ರಿಕೆಗಳು ಒಂದೇ ಉತ್ತರ ಹೊಂದಿದ್ದು ಸಾಮಾನ್ಯವಾಗಿ ನಿರ್ದಿಷ್ಟ ಗೈಡ್‌ನಿಂದ ಉತ್ತರಗಳು ನಕಲಾಗಿವೆ ಎಂಬ ಸಂಶಯ ಮೌಲ್ಯಮಾಪಕರು ವ್ಯಕ್ತಪಡಿಸಿದ್ದಾರೆ.

6) ಕೆಲವು ಕೇಂದ್ರಗಳಲ್ಲಿ ಸಾಮೂಹಿಕ ನಕಲು ಕಾಣದಿದ್ದರೂ ಒಬ್ಬ ವಿದ್ಯಾರ್ಥಿ ಇನ್ನೊಬ್ಬ ವಿದ್ಯಾರ್ಥಿಯ ನಕಲು ಮಾಡಿರುವುದು ಸಾಬೀತಾಗಿದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಈ ಕೇಂದ್ರಗಳಲ್ಲಿ ಮೇಲುಸ್ತುವಾರಿ ಸರಿಯಾದ ನಿಟ್ಟಿನಲ್ಲಿ ಆಗಿಲ್ಲ. ಅದು ಯಾದಗಿರಿ ಜಿಲ್ಲೆ ಆಗಿರಲಿ ಅಥವಾ ಇತರೆ ಜಿಲ್ಲೆಯಾಗಿರಲಿ, ಯಾವ ಉಪ ನಿರ್ದೇಶಕರಾಗಲೀ ಅಥವಾ ಬಿಇಓಗಳಾಗಲೀ ತಮ್ಮ ವ್ಯಾಪ್ತಿಯ ಕೇಂದ್ರಗಳಿಗೆ ಭೇಟಿ ನೀಡಿದಾಗ ಇಂತಹ ಒಂದು ಪ್ರಕರಣವನ್ನೂ ಮಂಡಳಿಗೆ ವರದಿ ಮಾಡಿಲ್ಲ. ಅವರ ಹಂತದಲ್ಲೂ ಸಹ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸುವ ಪ್ರಯತ್ನಗಳನ್ನು ಮಾಡದೆ ಕರ್ತವ್ಯಲೋಪ ಎಸಗಿರುವುದು ಸ್ಪಷ್ಟವಾಗಿ ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿಯೇ ಯಾದಗಿರಿ ಜಿಲ್ಲೆಯ ಎಸ್.ಎಸ್.ಎಲ್.ಸಿ ಪರೀಕ್ಷೆಯ 2005ರ ಫಲಿತಾಂಶಗಳನ್ನು ವ್ಯಾಪಕವಾದ ಶೈಕ್ಷಣಿಕ ವಿಶ್ಲೇಷಣೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಬಗ್ಗೆ ನಿರ್ದೇಶಕರು ಕರ್ನಾಟಕ ಪ್ರೌಢಶಿಕ್ಷಣ

ಪರೀಕ್ಷಾ ಮಂಡಳಿ, ಇವರು ಸವಿಸ್ತಾರವಾದ ವರದಿಯನ್ನು ಸಹ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ಸರ್ಕಾರದ ಹಂತದಲ್ಲಿ ನಿಯಮನುಸಾರ ಕ್ರಮ ವಹಿಸಲಾಗುತ್ತಿದೆ.

ಶ್ರೀ ನರಸಿಂಹನಾಯಕ್ (ರಾಜೂಗೌಡ): ಅಧ್ಯಕ್ಷರೇ, ಈಗಾಗಲೇ ನಮ್ಮ ಯಾದಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ 27ನೇ ಸ್ಥಾನ ಇದ್ದುದು 4ನೇ ಸ್ಥಾನಕ್ಕೆ ಬಂದಿದ್ದಕ್ಕೋಸ್ಕರ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಸುಮಾರು 2001ರಲ್ಲಿ ಯಾದಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರುವುದು 31 ಪರ್ಸೆಂಟ್. ಆದಾದ ನಂತರ 2002ರಲ್ಲಿ 42 ಪರ್ಸೆಂಟ್ 2003ರಲ್ಲಿ 58 ಪರ್ಸೆಂಟ್. ಈ ಸಾರಿ 73 ಪರ್ಸೆಂಟ್ ಆಗಿದೆ. ಇದರಿಂದ ಕರ್ನಾಟಕದಲ್ಲಿ 4ನೇ ಸ್ಥಾನಕ್ಕೆ ಯಾದಗಿರಿ ಶೈಕ್ಷಣಿಕ ಜಿಲ್ಲೆ ಬಂದಿದೆ. ಮತ್ತು ಮಹಿಳೆಯರು ಕರ್ನಾಟಕದಲ್ಲಿ ಪ್ರಥಮ ಎಲ್ಲಾ ಜಿಲ್ಲೆಗಳಿಗೂ ಹೋಲಿಸಿದರೆ ಯಾದಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಸಗಿದ್ದಾರೆ. ಅಂತಹ ಒಂದು ಒಳ್ಳೆಯ ಪ್ರಗತಿಯಲ್ಲಿರುವಂಥ ಜಿಲ್ಲೆಗೆ ಈ ತರಹದ ಕಳಂಕ ಹೊರಿಸಿ ಇನ್ನು ಮೇಲೆ ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿರುವ ಯಾರೂ ಕೂಡ ಓದಲೇಬಾರದು. ಬುದ್ಧಿವಂತರಾಗಲೇಬಾರದು. ಏನಿದ್ದರೂ, ಬೆಂಗಳೂರು ಮತ್ತು ಸುತ್ತಮುತ್ತಲಿರುವವರು ಮಾತ್ರ ಬುದ್ಧಿವಂತರಾಗಬೇಕೆಂಬ ಒಂದು ನಿಟ್ಟಿನಲ್ಲಿ ಅಧಿಕಾರಿಗಳು ಈ ಕ್ರಮ ಕೈಗೊಂಡಿದ್ದಾರೆ. ಇದು ಸರಿಯಿಲ್ಲ, ಏಕೆಂದರೆ, ಹೋದಸಾರಿ ನಮ್ಮ ಯಾದಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ 16.29 ಪರ್ಸೆಂಟ್ ಹೆಚ್ಚಾಗಿದೆ. ಆವಾಗ ಏಕೆ ಈ ಕ್ರಮ ಕೈಗೊಳ್ಳಲಿಲ್ಲ. ಕೊನೆಯ ಬಾರಿಗೆ ಇಲ್ಲಿ ಬೆಂಗಳೂರು ಗ್ರಾಮಾಂತರ 17ನೇ ಸ್ಥಾನದಲ್ಲಿದ್ದುದು.....

ಅಧ್ಯಕ್ಷರು: ಕ್ಲಾರಿಫಿಕೇಶನ್ ಕೇಳಿ ಎಂದರೆ ನೀವು ಭಾಷಣ ಮಾಡ್ತ ಇದ್ದೀರಲ್ಲಾ.

ಶ್ರೀ ನರಸಿಂಹನಾಯಕ್ (ರಾಜೂಗೌಡ): ಒಂದು ವೇಳೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದ್ದರೆ ಫಲಿತಾಂಶ ಪ್ರಕಟಗೊಳ್ಳುವ ಮೊದಲೇ ಕ್ರಮ ಕೈಗೊಳ್ಳಬೇಕಾಗಿತ್ತು. ಈಗ 103 ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಏನು ಪ್ರಕಟಗೊಂಡಿದೆ, ಅವರೆಲ್ಲರೂ ಹೋಗಿ ಅಡ್ಮಿಶನ್ಸ್ ಮಾಡಿಸಿದ್ದಾರೆ. ಅದನ್ನು ಈಗ ತಡೆಗಟ್ಟಿ ವಿತ್ ಹೆಲ್ಡ್‌ನಲ್ಲಿಡುವ ಪರಿಸ್ಥಿತಿ ಇದೆ. ಈ ರೀತಿ ಆದಾಗ ಅವರ ಭವಿಷ್ಯ ಹಾಳಾಗುತ್ತದೆ. ಈ ತರಹ ಅವರ ಭವಿಷ್ಯ ಹಾಳಾಗಿ 103 ವಿದ್ಯಾರ್ಥಿಗಳಲ್ಲಿ ಯಾವುದೇ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡರೆ ಅದಕ್ಕೆ ನೇರವಾಗಿ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ. ಅದಕ್ಕೋಸ್ಕರ, ಇದರ ಬಗ್ಗೆ ತಾವು ಸ್ವತಃ ಇನ್ನೊಂದು ಸಾರಿ ಪರೀಕ್ಷಿಸಿ ಕ್ರಮ ಕೈಗೊಳ್ಳಬೇಕು. ಏಕೆಂದರೆ, ಇಲ್ಲಿ ಕುಂತು ಮಾಡುವುದರಿಂದ ಏನೂ ಅರ್ಥವಿಲ್ಲ.

ಇವೊತ್ತಿನ ದಿವಸ ಯಾದಗಿರಿ ಶೈಕ್ಷಣಿಕ ಜಿಲ್ಲೆ ಯಾವ ಹಂತದಲ್ಲಿ ಇಷ್ಟೊಂದು ಪ್ರಗತಿ ಹೊಂದಿದೆ ಅಂತ ಕಾದು ನೋಡಬೇಕಾಗುತ್ತದೆ. ಸಾಕಷ್ಟು ಪ್ರತಿ ಶನಿವಾರ ತಿಂಗಳ ಕೊನೆ ಶನಿವಾರ ಶಿಕ್ಷಕರ ಕಾರಾಗೃಹ ಅಂತ ಮಾಡಿ ಎಲ್ಲಾ ಶಿಕ್ಷಕರನ್ನೂ ಸೇರಿಸಿ ಮೀಟಿಂಗ್ ಮಾಡಿ ಹೆಚ್ಚಿನ ಒಂದು ಕ್ಲಾಸ್ ತೆಗೆದುಕೊಂಡು ಅಭಿವೃದ್ಧಿ ಹೊಂದಿದೆ. ಅದಕ್ಕೋಸ್ಕರ, ಇನ್ನು ಮೇಲೆ ಯಾರೂ ಹಿಂದುಳಿದ ತಾಲ್ಲೂಕುಗಳಲ್ಲಿ ಓದಿಸಲೇಬಾರದು, ಯಾರೂ ಮುಂದೆ ಬರಬಾರದೆಂದು ಈ ಕ್ರಮ ತಾವು ಕೈಗೊಳ್ಳಿ ಈ ಗ್ರಾಮಾಂತರ ಪ್ರದೇಶ ನಾಲ್ಕನೇ ಸ್ಥಾನಕ್ಕೆ ಬಂದರೆ ಬಿಇಓ ಆಗಿರುವ ದೊಡ್ಡಸಿದ್ದರವರಿಗೆ ತಾವು ಸನ್ಮಾನ ಮಾಡಿದಿರಿ, ಎಲ್ಲಿ ಬೇಕಲ್ಲಿ ಪ್ರಶಂಸೆ ಮಾಡಿದಿರಿ. ನಮಗೇನೂ ಬೇಸರವಿಲ್ಲ. ನಮ್ಮ ಹಿಂದುಳಿದವರು ಏನು ಮುಂದೆ ಬಂದಿದ್ದಾರೆ, ವಿದ್ಯಾವಂತರಾಗಿದ್ದಾರೆ, ಅವರಿಗೆ ಸನ್ಮಾನ ಮಾಡುವುದು ಬೇಕಾಗಿಲ್ಲ, ಓದಿಸಿದ್ದಕ್ಕೆ ಶಹಭಾಷ್ ಗಿರಿ ಸಿಕ್ಕಿದರೆ ಸಾಕು. ಅದು ಬಿಟ್ಟು ಇವತ್ತಿನ ದಿವಸ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಅವರಿಗೆ ಮಾನಸಿಕ ಹಿಂಸೆ ಕೊಡುವುದರಿಂದ ಮುಂದಿನ ವರ್ಷದಲ್ಲಿ ಯಾವುದೆ ವಿದ್ಯಾರ್ಥಿಗಳನ್ನು ಓದಿಸಲಾರದಂತ ಪರಿಸ್ಥಿತಿ ಬರುತ್ತದೆ. ಮುಂದೆ ಯಾರೂ ಹಿಂದುಳಿದವರು ಓದಲೇಬಾರದು, ಅವರ ಬಳಿ ಎಷ್ಟೇ ಹಣವಿದ್ದರೂ ಅವರು ಅಲ್ಲೇ ಇರಬೇಕು, ವಿದ್ಯಾಸರಸ್ವತಿಯನ್ನು ಬೆಂಗಳೂರು ಮತ್ತು ಸುತ್ತಮುತ್ತ ಗ್ರಾಮಾಂತರದಲ್ಲಿರುವವರಷ್ಟೇ ಕಬ್ಜಾ ಮಾಡಿಕೊಂಡಿದ್ದಾರೆ, ಅವರಿಗೇ ಜಾಗವಿಲ್ಲವೆಂದರೆ ನಮ್ಮದೇನೂ ಅಭ್ಯಂತರವಿಲ್ಲ, ಅದಕ್ಕೋಸ್ಕರ, ಮಾನ್ಯ ಮಂತ್ರಿಗಳು ತಾವೇ ಸ್ವತಃ ಇದನ್ನು ಪರೀಕ್ಷಿಸ ಬೇಕಾದರೆ ನಿಮಗೆ ತಪ್ಪು ಕಂಡುಬಂದಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳಿ. ಅದನ್ನು ಬಿಟ್ಟು ನೀವು ಬರೀ ಇದೊಂದಕ್ಕೆ ಯಾದಗಿರಿ ಶೈಕ್ಷಣಿಕ ಜಿಲ್ಲೆ ಕೆಲವೊಂದು ಅಧಿಕಾರಿಗಳ ದ್ವೇಷಕ್ಕೋಸ್ಕರ ತಾವು ಇದನ್ನು ವಹಿಸಬಾರದೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಂಡು ಸರಿಯಾಗಿ ಏಕೆಂದರೆ, ಇದು ಒಬ್ಬಿಬ್ಬರಲ್ಲ ಸಾಕಷ್ಟು ವಿದ್ಯಾರ್ಥಿಗಳ ಭವಿಷ್ಯದ ಅವರ ಜೀವನದ ನಿರ್ಧಾರ ತೆಗೆದುಕೊಳ್ಳುವಂಥ ಪರಿಸ್ಥಿತಿ ಇದೆ. ಮತ್ತು ಉತ್ತಮವಾದ ಶಿಕ್ಷಕರಿಗೆ ಅವರು ಶಿಕ್ಷಣ ಮಾಡುವಂಥ ವೃತ್ತಿ ಮತ್ತು ಅವರ ಜೀವನದ ಮೇಲೆ ಗಂಭೀರವಾದ ಪರಿಸ್ಥಿತಿಯುಂಟಾಗುತ್ತದೆ. ಇವೊತ್ತಿನ ದಿವಸ ತಾವು ಇದರ ಬಗ್ಗೆ ಹೆಚ್ಚಿನ ಗಮನ ವಹಿಸಬೇಕಾಗುತ್ತದೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ. ವೈಜನಾಥ ಪಾಟೀಲ್: ಒಮ್ಮೆಲೆ 28 ಪರ್ಸೆಂಟ್‌ನಿಂದ 85 ಪರ್ಸೆಂಟ್ ವರೆಗೆ ಬಂದಿಲ್ಲ, ಬಹುಶಃ ಅಲ್ಲಿ ಹೆಚ್ಚಿನ ಶ್ರಮ ತೆಗೆದುಕೊಂಡು ಮತ್ತೇನೋ ಮಾಡಿ ಕಳೆದ ನಾಲ್ಕು ವರ್ಷಗಳಿಂದಲೂ ಪ್ರತಿ ವರ್ಷವೂ ಬದಲಾಗುತ್ತ ಹೋಗಿದೆ ಏಕ್‌ದಂ ಬಂದಿಲ್ಲ. ಆ ದೃಷ್ಟಿಯಿಂದ ಮತ್ತೆ ಯಾವ ಕಾರಣದಿಂದ ಆ ರೀತಿ ಹೆಚ್ಚು

ಬಂದಿದೆಯೆಂದು ಪರಿಶೀಲಿಸಬಹುದಾಗಿತ್ತು. ಏಕ್‌ದಂ ಅವರು ಆ ರೀತಿ ಕ್ರಮ ಕೈಗೊಳ್ಳುವುದು ತಪ್ಪಾಗುತ್ತದೆ.

ಶ್ರೀ ರಾಮಲಿಂಗಾರೆಡ್ಡಿ: ಸಭಾಧ್ಯಕ್ಷರೆ, ಇದರಲ್ಲಿ ಹೈದರಾಬಾದ್–ಕರ್ನಾಟಕ, ಹಳೇ ಮೈಸೂರು ಆ ತರಹದ ಪ್ರಶ್ನೆಯೇನೂ ಬರುವುದಿಲ್ಲ. ಹೈದರಾಬಾದ್–ಕರ್ನಾಟಕ ಶೈಕ್ಷಣಿಕವಾಗಿ ಹಿಂದುಳಿದಿದೆ. ಅದಕ್ಕೆ ಏನು ಸಪೋರ್ಟ್ ಮಾಡಬೇಕೋ ಸರ್ಕಾರ ಮಾಡುತ್ತಿದೆ. ಆದರೆ, ಇದು ಆಗಿರುವುದು ಬರೀ ಯಾದಗಿರಿಯಂತಹ ಶೈಕ್ಷಣಿಕ ಜಿಲ್ಲೆಯಲ್ಲಿ ಮಾತ್ರವಲ್ಲ, ಬೆಂಗಳೂರಿನಲ್ಲೂ ಕೂಡ ಇಲ್ಲೂ ಒಂದು ಶಾಲೆಯಲ್ಲಿ ಕಾಪಿ ಹೊಡೆದು ಸಿಕ್ಕಿಹಾಕಿಕೊಂಡಿದೆ. ಎಲ್ಲೆಲ್ಲಿ ಈ ರೀತಿ ಪರ್ಸಂಟೇಜ್ ಇದ್ದಕ್ಕಿದ್ದಂತೆ ಜಾಸ್ತಿಯಾಗುತ್ತದೋ ಅಂತಹ ಕಡೆಗಳಲ್ಲಿ ನಮ್ಮ ಇಲಾಖೆಯವರು ತನಿಖೆ ಮಾಡುತ್ತಾರೆ. ತನಿಖೆ ಮಾಡಿದಾಗ ಕಾಪಿ ಹೊಡೆದಿರುವುದನ್ನು ನಾವು ಸಕ್ರಮ ಮಾಡುವುದಕ್ಕಾಗುತ್ತದೆಯೇ? ಕಾಪಿ ಹೊಡೆಯುವುದನ್ನು ಸಕ್ರಮ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲಿ ತಪ್ಪಾಗಿದೆಯೋ ಅಲ್ಲಿ ಪನಿಶ್‌ಮೆಂಟ್ ಆಗಬೇಕು. ಕಾಪಿ ಹೊಡೆದು ಪಾಸ್ ಮಾಡಿಸಿದ್ದರೆ ಅದಕ್ಕೆ ಸರ್ಕಾರದವರಾದ ನಾವು ಸಕ್ರಮ ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ? ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅಧ್ಯಕ್ಷರೆ, ತಾವು ತಮ್ಮ ಆಪ್ತ ಸಹಾಯಕರ ಜೊತೆ ಮಾತುಕತೆಯಲ್ಲಿ ನಿರತರಾಗಿದ್ದೀರಿ. ಅವರು ರೈಸ್ ಮಾಡಿರತಕ್ಕ ವಿಷಯ ನೋಡಿ. ರೆಡ್ಡಿಯವರೆ, You are trying to misguide the House. ಅವರು ಏನು ಹೇಳುತ್ತಿದ್ದಾರೆ, ಒಂದೇ ದಿವಸದಲ್ಲಿ ನಮ್ಮ ಪ್ರೋಗ್ರೆಸ್ ಅನ್ನು ಅಚೀವ್ ಮಾಡಿಲ್ಲ. ಕಳೆದ ನಾಲ್ಕಾರು ವರ್ಷಗಳಲ್ಲಿ ಸ್ಟೇಜ್–ಬೈ–ಸ್ಟೇಜ್ ನಾವು ಈ ಸ್ಥಿತಿಗೆ ಬಂದು ತಲುಪಿದ್ದೇವೆ. ನಾವು ಹಿಂದುಳಿದ ಪ್ರದೇಶದಲ್ಲಿರುವವರು ಓದಿ ಪಾಸ್ ಮಾಡಿದ ಮಾತ್ರಕ್ಕೆ ನಮ್ಮ ಮೇಲೆ ಒಂದೇ ಸಲಕ್ಕೆ ಅನುಮಾನ ಬಂದುಬಿಟ್ಟಿದೆ. ಬುದ್ಧಿವಂತರಾದವರು ಬರೀ ಬೆಂಗಳೂರಿನಲ್ಲಿ ಮಾತ್ರ ಇರುವುದು? ಎಂದು ಅವರು ಕೇಳಿದರು You are trying to cast aspersions on those people. ಅದು Copying.Copying ಅಂತ ಪ್ರೂಫ್ ಇದ್ದರೆ ಯಾರು ವಿಜಿಲೆನ್ಸ್ ಸ್ಟಾಫ್ ಇದ್ದರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಅಲ್ಲಿ Percentage of result ಜಾಸ್ತಿ ಬಂದ ಮಾತ್ರಕ್ಕೆ ಅಲ್ಲಿ ಕಾಪಿ ನಡೆದಿದೆ ಅಂತಲೇ? ಹಾಗಾದರೆ, ಬೆಂಗಳೂರಿನಲ್ಲಿ ಸೆಂಟ್ ಪರ್ಸೆಂಟ್ ಬಂದರೆ ನ್ಯಾಷನಲ್ ಕಾಲೇಜಿನಲ್ಲಿ, ಎಂಇಎಸ್ ಕಾಲೇಜಿನಲ್ಲಿ ಅವರೆಲ್ಲ ಬೃಹಸ್ಪತಿಗಳು, ಡೈರೆಕ್ಟಾಗಿ ಸರಸ್ವತಿ ಬಾಯಿಂದ ಬಂದು ಉದುರಿದವರೇ? ಇದು ಎಷ್ಟು ಚೆನ್ನಾಗಿದೆಯಪ್ಪಾ.

ಶ್ರೀ ರಾಮಲಿಂಗಾರೆಡ್ಡಿ: ಈಗ ಹಂತ ಹಂತವಾಗಿ ಬಂದಿದೆಯೆಂದು ಹೇಳುತ್ತಾರೆ. ನಮ್ಮ ಅಧಿಕಾರಿಗಳಾದವರು ಎಕ್ಸಾಮಿನ್ ಮಾಡದೆ ಆಕ್ಷನ್ ತೆಗೆದುಕೊಂಡುಬಿಡುತ್ತಾರಾ? ನಮ್ಮ ಅಧಿಕಾರಿಗಳು ಹೋಗಿ ಕೂಲಂಕುಷವಾಗಿ ಎಲ್ಲಾ ಡೀಟೇಲ್ ರಿಪೋರ್ಟ್ ತೆಗೆದುಕೊಂಡು ಆಮೇಲೆ ಆಕ್ಷನ್ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಕೋಲಾರದಲ್ಲಿ 14 ಪರ್ಸೆಂಟ್ ಬರುತ್ತದೆ. ಇಷ್ಟೆಲ್ಲಾ ಆದರೂ ಏಕೆ ಅಲ್ಲಿ ಪರ್ಸೆಂಟ್ ಏರುತ್ತಿಲ್ಲ ಎನ್ನುವುದಕ್ಕೆ ನಿಮ್ಮ ಅಧಿಕಾರಿಗಳಾದವರು ಎನ್‌ಕ್ವೇರಿ ಮಾಡುವುದಿಲ್ಲ. ಗುಲ್ಬರ್ಗಾದಲ್ಲಿ 78 ಪರ್ಸೆಂಟ್ ಬಂದರೆ ಹೇಗೆ ಬಂತೆಂದು ನಿಮ್ಮವರಿಗೆ ಅನುಮಾನ ಬಂದುಬಿಡುತ್ತದೆ. ಕಡಿಮೆ ಬಂದಿರುವ ಕಡೆ ಅದನ್ನು ಜಾಸ್ತಿ ಮಾಡುವ ಬಗ್ಗೆ ನಿಮ್ಮ ಜವಾಬ್ದಾರಿ ಇಲ್ಲ, ಜಾಸ್ತಿ ಬಂದರೆ ಹಳ್ಳಿ ಕಡೆಗೆ ನಿಮಗೆ ಅನುಮಾನ ಬರುತ್ತದೆ.

ಶ್ರೀ ರಾಮಲಿಂಗಾರೆಡ್ಡಿ: ಸಭಾಧ್ಯಕ್ಷರೆ, ಅಲ್ಲಿ, ನಮ್ಮ ಅಧಿಕಾರಿಗಳು ಹೋಗಿದ್ದಾರೆ. ಕೂಲಂಕುಷವಾಗಿ ಎಲ್ಲಾ ಪೇಪರ್ಸ್ ಚೆಕ್ ಮಾಡಿದ್ದಾರೆ. ಯಾದಗಿರಿ ರೂರಲ್ ಜಿಲ್ಲೆಯಲ್ಲಿ ಪರ್ಸಂಟೇಜ್ ಜಾಸ್ತಿ ಬಂದರೆ ಇನ್ನೂ ಖುಷಿಯಾಗಬೇಕು. ನಾವು ಬೆನ್ನು ತಟ್ಟುತ್ತೇವೆ. ಆದರೆ, ತಪ್ಪು ಮಾಡಿದವರನ್ನು ಬಿಡುವುದಕ್ಕಾಗುತ್ತಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆಫೀಸರ್ಸ್, ಇನ್‌ವಿಜಿಲೇಟರ್ಸ್ ಅನ್ನು ಸಸ್ಪೆಂಡ್ ಮಾಡಿದ್ದೀರಾ?

ಶ್ರೀ ರಾಮಲಿಂಗಾರೆಡ್ಡಿ: ಓದುತ್ತಿದ್ದರೆ, ಇಂಪ್ರೂವ್‌ಮೆಂಟ್ ಮಾಡಿದ್ದರೆ ಬೆನ್ನು ತಟ್ಟುತ್ತೇವೆ.

ಶ್ರೀ ಕೆ. ಜಯಪ್ರಕಾಶ್: ಆಕ್ಷನ್ ತೆಗೆದುಕೊಂಡ್ರಾ?

ಶ್ರೀ ರಾಮಲಿಂಗಾರೆಡ್ಡಿ: ತೆಗೆದುಕೊಳ್ತೀವಿ, ಅವರ ಮೇಲೂ ತೆಗೆದುಕೊಳ್ತೀವಿ. ಬಿಇಓ ಮೇಲೂ ತೆಗೆದುಕೊಳ್ತೀವಿ, ಇನ್‌ವಿಜಿಲೇಟರ್ಸ್ ಮೇಲು ತೆಗೆದುಕೊಳ್ತೀವಿ ಎಲ್ಲರ ಮೇಲೂ ತೆಗೆದುಕೊಳ್ತೀವಿ.

(ಮಾನ್ಯ ಸದಸ್ಯರಾದ ಆಲ್ಕೋಡ್ ಹನುಮಂತಪ್ಪನವರು ಮಾತನಾಡಿದ್ದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಶ್ರೀ ನರಸಿಂಹನಾಯಕ್ (ರಾಜೂಗೌಡ): ಅಧ್ಯಕ್ಷರೇ, ಹೋದ ಸಾರಿ 16 ಪರ್ಸೆಂಟ್ ಹೆಚ್ಚಾಗಿದೆ. ಈ ಸಲ 14.93 ಆಗಿದೆ. ತಾವು ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಟ್ಟರೆ ನಾವು ಯಾವ ತರಹ...

ಅಧ್ಯಕ್ಷರು: ನರಸಿಂಹನಾಯಕರೆ, ಈಗ ವ್ಯಾಪಕವಾಗಿ ಕಾಪಿ ನಡೆಯುತ್ತಿರುವುದು ಸತ್ಯ ಅದರಲ್ಲೇನೂ ಅನುಮಾನವಿಲ್ಲ ಆದರೆ, ನಿಮ್ಮ ಇಲಾಖೆ ಅಧಿಕಾರಿಗಳಿದ್ದಾರಲ್ಲ, ಅವರೂ ಕೂಲಂಕುಷವಾಗಿ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ರೂಢಿ ಇಲ್ಲ ನಮ್ಮಲ್ಲಿ ಏನಾಗಿದೆಯೆಂದರೆ, ಜಸ್ಟೀಸ್ ಸಫರ್ ಆಗುತ್ತಿದೆ. ಅವರು ಏನು ಹೇಳುತ್ತಿದ್ದಾರೆ, ಅದೇನಾದರೂ ಇದ್ದರೂ ನೀವು ಒಂದು ಸ್ವಲ್ಪ ಈ ವಿಚಾರದಲ್ಲಿ ಸರಿಯಾದ ರೀತಿಯಲ್ಲಿ ತನಿಖೆ ಮಾಡಿಸಿ ಅದರಲ್ಲಿ ವಿಮರ್ಶೆ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದರ ಜೊತೆಗೆ ಒಂದು ತನಿಖೆಯಾಗಬೇಕು. ಸಂಸ್ಕೃತದಲ್ಲಿ ಈ ರಾಜ್ಯದಲ್ಲಿ ಯಾರೂ ಫೇಲ್ ಆಗುವುದಿಲ್ಲ ಉರ್ದು ಮೀಡಿಯಂನಲ್ಲಿ ಯಾರೂ ಫೇಲ್ ಆಗುವುದಿಲ್ಲ, ಏನಾಗುತ್ತಿದೆಯೆಂದು ಅಧಿಕಾರಿಗಳಿಗೆ ತನಿಖೆ ಮಾಡಿಸುವುದಕ್ಕೆ ಹೇಳಿ. ಮೇಷ್ಟ್ರೇ ಇರುವುದಿಲ್ಲ, ಆದರೂ ಈ ರಾಜ್ಯದಲ್ಲಿ ಯಾರೂ ಫೇಲಾಗುವುದಿಲ್ಲ. ಆ ಮೀಡಿಯಂಗಲ್ಲಿ ಬರೆದುಬಿಟ್ಟರೆ ನಂಬರ್ ವನ್ ಇರುತ್ತಾರೆ. ಈಗ ಯಾರೂ ತನಿಖೆ ಮಾಡಲಿಲ್ಲವಲ್ಲ ಸಾರ್. ಒಂದು ಬ್ಯಾಕ್‌ವರ್ಡ್ ಏರಿಯಾದಲ್ಲಿ ಯಾರಾದರೂ ಮಕ್ಕಳು ಬರೆದು ಪಾಸಾಗುತ್ತಾರೆಂದರೆ, ತನಿಖೆಗಳು ಆರಂಭವಾಗುತ್ತವೆ.

ಅಧ್ಯಕ್ಷರು: No, No ತನಿಖೆಗಳನ್ನು ಮಾಡಬಾರದೆಂದು ಹೇಳುವುದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾಡಲಿ ಸಾರ್.

ಅಧ್ಯಕ್ಷರು: ಈಗ ಏನಾಗಿದೆಯೆಂದರೆ....

ಶ್ರೀ ಜೆ.ಸಿ. ಮಾಧುಸ್ವಾಮಿ: ಎಲ್ಲಾ ಕಡೆಗಳಲ್ಲೂ ತನಿಖೆ ಮಾಡಲಿ ಸಾರ್. 80 ಪರ್ಸೆಂಟ್, 90 ಪರ್ಸೆಂಟ್ ಬಂದಿರುವ ಎಲ್ಲಾ ಕಡೆಗಳಲ್ಲೂ ತನಿಖೆಗಳನ್ನು ಮಾಡಲಿ.

ಅಧ್ಯಕ್ಷರು: ಕಾಪಿ ಮಾಡಿರುವವರಿಗೆ ಎನ್‌ಕರೇಜ್ ಮಾಡುವುದು ಸರಿಯಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅದೇನೆ ಇರಲಿ, ಮಾನ್ಯ ಮಂತ್ರಿಗಳ ಅಬ್ಸರ್ವೇಶನ್ ಏನಿದೆ, ಅಲ್ಲಿ ಕ್ರಮೇಣ ಆಗಿರತಕ್ಕ ಪ್ರಗತಿಯ ಬಗ್ಗೆ ಅವರು ಹೇಳಿರತಕ್ಕ ಹೇಳಿಕೆ ನಾವು- ಸದನದ ಈ ಭಾಗದಲ್ಲಿರತಕ್ಕವರು, ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂಥ ಜನಪ್ರತಿನಿಧಿಗಳು ನಾವು ಅದನ್ನು ನಮಗಾಗಿರುವ ಇನ್‌ಸಲ್ಟ್ ಎಂದು ತೆಗೆದುಕೊಳ್ಳುತ್ತೇವೆ. We protest against it. No, no Let there be a detailed enquiry into the whole thing. It is not that easy.ಏನು ಮಕ್ಕಳು ಓದುವುದಿಲ್ಲವೇ?ಬರೀ ಬೆಂಗಳೂರಿನಲ್ಲಿರುವ ಹುಡುಗರು ಮಾತ್ರವೇ

ಪರ್ಸಂಟೇಜ್ ತೆಗೆದುಕೊಳ್ಳುವುದು? ಯಾರು ಹೇಳಿದ್ದು? ಬೆಂಗಳೂರಿನಲ್ಲಿರುವವರು ಪಾಸಾಗುತ್ತಾರೆ, ಹಳ್ಳಿಯಲ್ಲಿರುವವರು ಫೇಲಾಗುತ್ತಾರೆ.

ಶ್ರೀ ನರಸಿಂಹನಾಯಕ್ (ರಾಜೂಗೌಡ): ಅದನ್ನು ಕೈಬಿಡಬೇಕೆಂದು ಆದೇಶ ಮಾಡಿ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ:.... ಅದನ್ನು ಕೈಬಿಡಲಿಕ್ಕಾಗುವುದಿಲ್ಲ. ಯಾರು ಕಾಪಿ ಮಾಡಿದ್ದಾರೋ ಅವರ ಮೇಲೆ ಶಿಕ್ಷೆ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ. ಅದನ್ನು ಇನ್ನೊಂದು ಸಲ ಬೇಕಾದರೆ, re examine ಮಾಡಿ ಎಂದರೆ ಮಾಡುತ್ತೇನೆ. ಕಾಪಿ ಹೊಡೆದಿರುವವರಿಗೆ ಬಿಡು ಎಂದು ಹೇಳುವುದಕ್ಕಾಗುತ್ತದೆಯೇ? ಅವರನ್ನು ಬಿಡುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:.... ಗ್ರಾಮೀಣ ಪ್ರದೇಶದಲ್ಲಿ, ಅದರಲ್ಲೂ ಹಿಂದುಳಿದಂತಹ ಹೈದರಾಬಾದ್-ಕರ್ನಾಟಕ ಏರಿಯಾದಲ್ಲಿ ತಾವು ಈ ರೀತಿ ನಡೆದುಕೊಂಡರೆ....

ಅಧ್ಯಕ್ಷರು: ಮಾನ್ಯ ಗೋವಿಂದ ಕಾರಜೋಳರವರೆ, ಬ್ಲಾಂಕೆಟ್ ಆಗಿ ಹೇಳುವುದು ಸರಿಯಲ್ಲ, ಮಾನ್ಯ ಸಚಿವರು ಮತ್ತೆ ಪುನರ್ ವಿಮರ್ಶೆ ಮಾಡುತ್ತೇನೆ ಎಂದು ಹೇಳಿದ್ದಾರೆ.....

(ಗೊಂದಲ)

ಶ್ರೀ ನರಸಿಂಹ ನಾಯಕ್ (ರಾಜೂಗೌಡ):.... ಇಲ್ಲಿ ಸೇಂಟ್ ಜೋಸೆಫ್ ಅಥವಾ ಮೇರಿಸ್ ಎನ್ನುವಂತಹ ಯಾವುದಾದರೂ ಕ್ರಿಶ್ಚಿಯನ್ಸ್ ನಡೆಸುವ ಸ್ಕೂಲ್ ಇದ್ದರೆ, ಅಲ್ಲಿ ಮಿನಿಸ್ಟರ್ ಮಕ್ಕಳು ಮತ್ತು ಇತರರು ಒಳ್ಳೊಳ್ಳೆಯ ಬಟ್ಟೆ ಹಾಕಿಕೊಂಡು ಕಾಪಿ ಹೊಡೆದರೆ, ಅದನ್ನು ಯಾರೂ ನೋಡುವುದಿಲ್ಲ. ಹಳ್ಳಿಯಲ್ಲಿ ಹರಿದ ಬಟ್ಟೆ ಹಾಕಿಕೊಂಡು ಒಬ್ಬ.....

(ಗೊಂದಲ)

ಅಧ್ಯಕ್ಷರು: ಈಗ ಮುಂದಿನ ಅಜೆಂಡಾಗೆ ಹೋಗೋಣ. ಮಾನ್ಯ ಕಾರಜೋಳರವರೆ, ತಮ್ಮ ಗಮನವನ್ನು ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಿ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ: ಯಾದಗಿರಿ ಅಷ್ಟೇ ಅಲ್ಲ, ಬೆಂಗಳೂರಿನ ಗಾಂಧಿನಗರದ ಹೈಸ್ಕೂಲ್‌ವೊಂದರಲ್ಲಿ ಕೂಡ ಇದೇ ರೀತಿ ಮಾಡಿದಮರ ಮೇಲೆ action ತೆಗೆದುಕೊಂಡಿದ್ದೇನೆ.....